ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ DSERT
DEPARTMENT OF STATE EDUCATIONAL RESEARCH AND TRAINING
NO 4, 100 FT RING ROAD, BANASHANKARI 3RD STAGE BENGALURU - 085
Email: dsert.kar@nic.in Website : http://dsert.kar.nic.in
Phone : 080 26422372 26422373 26422374 Fax:26422377

ಸಂಖ್ಯೆ: DPI. DSERT/ETC-1ಹೈ.ಕ.ಅ.ಯೋ-ಕೊ.ಪೂ.ಸಿ-1/2019-20. ದಿನಾಂಕ : 09-08-2019.

## ಸುತ್ತೋಲೆ

ವಿಷಯ : HKDB ಯೋಜನೆಯಡಿ 70 ಶಾಲೆಗಳಿಗೆ ಕೊಠಡಿಪೂರ್ವ ಸಿದ್ಧತೆಗಾಗಿ NEFT ಮುಖಾಂತರ ಹಣ ವರ್ಗಾವಣೆ ಮಾಡುವ ಬಗ್ಗೆ.

ಉಲ್ಲೇಖ : 1) ದಿನಾಂಕ 18-07-2019 ರಂದು ಈ ಕಛೇರಿಯಿಂದ 718 ಶಾಲೆಗಳಿಗೆ NEFT ಮೂಲಕ ಬಿಡುಗಡೆ ಮಾಡಿದ ಅನುದಾನ.
2) ಈ ಕಛೇರಿಯ ಸುತ್ತೋಲೆ ಸಮಸಂಖ್ಯೆ ದಿನಾಂಕ 05/08/2019.
3) ದಿನಾಂಕ 07-08-2019 ರಂದು ಈ ಕಛೇರಿಯಲ್ಲಿ ನಡೆದ ಸಭೆ.
4) ಪ್ರಾಂಶುಪಾಲರು, ಡಯಟ್, ರಾಯಚೂರು ಇವರು ದಿನಾಂಕ 07-08-2019 ರಂದು ಇ-ಮೇಲ್ ಮೂಲಕ ಕಳುಹಿಸಿದ ಮಾಹಿತಿ.

* * * * *

ಉಲ್ಲೇಖ 1 ರನ್ವಯ ಸಂಬಂಧಿಸಿದ ಡಯಟ್‌ಗಳು ಸಲ್ಲಿಸಿದ್ದ 718 ಬ್ಯಾಂಕ್ ಖಾತೆಗಳಿಗೆ ಪ್ರತಿ ಶಾಲೆಗೆ ರೂ 1.00 ಲಕ್ಷದಂತೆ ಅನುದಾನ ಬಿಡುಗಡೆ ಮಾಡಲಾಗಿತ್ತು. ಆದರೆ ಪ್ರಾಂಶುಪಾಲರು, ಡಯಟ್, ಬಳ್ಳಾರಿ ಇವರನ್ನು ಹೊರತುಪಡಿಸಿ, ಇತರೆ 5 ಡಯಟ್ ಪ್ರಾಂಶುಪಾಲರುಗಳು ಸಲ್ಲಿಸಿದ ಕೆಲವು ಶಾಲೆಗಳ ಬ್ಯಾಂಕ್ ಖಾತೆಯ ವಿವರಗಳಲ್ಲಿ ವ್ಯತ್ಯಾಸಗಳಿದ್ದ ಕಾರಣ 70 ಶಾಲೆಗಳಿಗೆ ಅನುದಾನ ವರ್ಗಾವಣೆಗೊಂಡಿರುವುದಿಲ್ಲ. ಈ ಕುರಿತಂತೆ ಬ್ಯಾಂಕ್‌ನಿಂದ ಮಾಹಿತಿ ಪಡೆದು ಸಂಬಂಧಿಸಿದ ಶಾಲೆಗಳನ್ನು ಗುರುತಿಸಿ, ಉಲ್ಲೇಖ-2 ರ ಸುತ್ತೋಲೆಯಂತೆ ವಿವರಗಳೊಂದಿಗೆ ಸಭೆಗೆ ಹಾಜರಾಗಲು ಸೂಚಿಸಲಾಗಿತ್ತು. ಅದರಂತೆ ಉಲ್ಲೇಖ-3 ರ ಸಭೆಯಲ್ಲಿ ಪ್ರಾಂಶುಪಾಲರು, ಡಯಟ್, ರಾಯಚೂರು ರವರನ್ನು ಹೊರತುಪಡಿಸಿ ಇತರೆ 5 ಡಯಟ್‌ಗಳ ಪ್ರಾಂಶುಪಾಲರು/ ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

ಸಭೆಯಲ್ಲಿ ನಡೆದ ಚರ್ಚೆ ಹಾಗೂ ಉಲ್ಲೇಖ-4 ರಂತೆ ಸಲ್ಲಿಸಿದ ಮಾಹಿತಿಯನ್ವಯ ಅನುಬಂಧ-1 ರಲ್ಲಿರುವ ಶಾಲೆಗಳಿಗೆ ಅನುದಾನ ಬಿಡುಗಡೆ ಮಾಡಲು ಡಯಟ್‌ಗಳಿಗೆ ಮೊತ್ತ ವರ್ಗಾವಣೆ ಮಾಡಲಾಗಿದೆ. ಸಂಬಂಧಿಸಿದ ಡಯಟ್‌ಗಳು ಅನುದಾನ ಸ್ವೀಕರಿಸಿದ ಎರಡು ದಿನಗಳೊಳಗಾಗಿ ಸಂಬಂಧಿಸಿದ ಶಾಲೆಗಳಿಗೆ NEFT / Account Payee Cheque ಮುಖಾಂತರ ಹಣ ಪಾವತಿಸಿ ಈ ಕಛೇರಿಗೆ ಸ್ವೀಕೃತಿಯನ್ನು ಇ-ಮೇಲ್ ಮೂಲಕ ಸಲ್ಲಿಸುವುದು.

Scanned by CamScanner

ಅನುಬಂಧ-1 ರಲ್ಲಿರುವ ಶಾಲೆಗಳನ್ನು ಹೊರತುಪಡಿಸಿ 4 ಜಿಲ್ಲೆಗಳ 12 ಶಾಲೆಗಳಿಗೆ ಅನುದಾನ ಬಿಡುಗಡೆಯಾಗಿರುವುದಿಲ್ಲವೆಂದು ಸಂಬಂಧಿಸಿದ ಡಯಟ್ ಪ್ರಾಂಶುಪಾಲರುಗಳು ತಿಳಿಸಿರುತ್ತಾರೆ. ಆದರೆ ಬ್ಯಾಂಕ್ ನವರು ನೀಡಿರುವ ವರದಿಯನ್ವಯ ಪರಿಶೀಲಿಸಿದಾಗ ಸಂಬಂಧಿಸಿದ ಡಯಟ್‌ಗಳು ಸಲ್ಲಿಸಿರುವ ಬ್ಯಾಂಕ್ ಖಾತೆಗಳಿಗೆ ಅನುದಾನ ವರ್ಗಾವಣೆಯಾಗಿರುವುದು ತಿಳಿದುಬಂದಿರುತ್ತದೆ. ಈ ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ. ಈ ಹಿನ್ನೆಲೆಯಲ್ಲಿ ಅನುಬಂಧ-2 ರ ವಿವರಗಳನ್ನು ಪರಿಶೀಲಿಸಿ ಯಾವ ಖಾತೆಗಳಿಗೆ ಅನುದಾನ ಜಮಾ ಆಗಿದೆಯೆಂಬುದನ್ನು ಪತ್ತೆ ಹಚ್ಚಿ ಸಂಬಂಧಿಸಿದ ಶಾಲೆಗಳಿಗೆ ಅನುದಾನ ಲಭ್ಯವಾಗುವಂತೆ ಮಾಡುವುದು ಸಂಬಂಧಿಸಿದ ಡಯಟ್ ಪ್ರಾಂಶುಪಾಲರುಗಳ ಜವಾಬ್ದಾರಿಯಾಗಿರುತ್ತದೆ.

ಬ್ಯಾಂಕ್‌ನವರು ಸಲ್ಲಿಸಿರುವ ವಿವರಗಳಂತೆ ಅನುದಾನ ಜಮೆಯಾಗದ ಶಾಲೆಗಳ ಪಟ್ಟಿಯನ್ನು ಈ ಕಛೇರಿಯಿಂದ ಕ್ರೋಢೀಕರಿಸಿ ಅನುದಾನ ಬಿಡುಗಡೆ ಮಾಡಲಾಗಿದೆ. ಸಂಬಂಧಿಸಿದ ಡಯಟ್ ಪ್ರಾಂಶುಪಾಲರುಗಳು ತಮ್ಮ ಹಂತದಲ್ಲಿ ಪರಿಶೀಲನೆ ನಡೆಸಿ, ಯಾವುದೇ ಶಾಲೆಗೆ ಎರಡು ಬಾರಿ ಅನುದಾನ ಬಿಡುಗಡೆಯಾಗದಂತೆ ಅಥವಾ ಯಾವುದೇ ಶಾಲೆ ಅನುದಾನದಿಂದ ವಂಚಿತರಾಗದಂತೆ ಅಗತ್ಯ ಕ್ರಮ ಕೈಗೊಳ್ಳುವ ಜವಾಬ್ದಾರಿಯು ಡಯಟ್ ಪ್ರಾಂಶುಪಾಲರುಗಳದ್ದಾಗಿರುತ್ತದೆ. ಶಾಲೆಗಳು ಅನುದಾನ ಪಡೆದ ಅಥವಾ ಪಡೆಯದಿರುವ ಬಗ್ಗೆ ಸಂಬಂಧಿಸಿದ ಶಾಲೆಗಳ ಮುಖ್ಯ ಶಿಕ್ಷಕರಿಂದ ದೃಢೀಕರಣ ಪತ್ರ ಪಡೆದು ಡಯಟ್ ಹಂತದಲ್ಲಿ ಸಂರಕ್ಷಿಸುವುದು ಹಾಗೂ ಲೆಕ್ಕ ತಪಾಸಣೆಯ ಸಮಯದಲ್ಲಿ ಹಾಜರುಪಡಿಸಲು ಸೂಚಿಸಿದೆ.

ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ
ಬೆಂಗಳೂರು

ಇವರಿಗೆ : ಅಗತ್ಯ ಕ್ರಮಕ್ಕಾಗಿ.

1) ಡಯಟ್ ಪ್ರಾಂಶುಪಾಲರು, ಬಳ್ಳಾರಿ, ಕೊಪ್ಪಳ, ರಾಯಚೂರು, ಬೀದರ್, ಕಲಬುರ್ಗಿ, ಯಾದಗಿರಿರವರಿಗೆ – ಅಗತ್ಯ ಕ್ರಮಕ್ಕಾಗಿ.

ಪ್ರತಿಗಳು : ಮಾಹಿತಿಗಾಗಿ :

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ
2) ಮಾನ್ಯ ಆಯುಕ್ತರು, ಸಾ.ಶಿ.ಇ, ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3) ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4) ಮಾನ್ಯ ಅಪರ ಆಯುಕ್ತರು, ಸಾ.ಶಿ.ಇ, ಗುಲ್ಬರ್ಗಾ ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಅನುಪಾಲನೆಗಾಗಿ ಕೋರಿ ಕಳುಹಿಸಿದೆ.
5) ಕಛೇರಿ ಪ್ರತಿ.

Scanned by CamScanner